ಅಧ್ಯಕ್ಷರು:- ಮಾನ್ಯ ಸಚಿವರು ಏನು ವ್ಯತ್ಯಾಸ ಆಗಿಲ್ಲ ಎಂದು ಹೇಳಿದ್ದಾರೆ. ಈಗ ಏನು ಮಾಡುವುದು? ನಮ್ಮಲ್ಲಿಯೂ ಇದೇ ತೊಂದರೆಯನ್ನು ಅನುಭವಿಸುತ್ತಿದ್ದೇವೆ.

ಶ್ರೀ ಎಸ್.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೇ, ತಾವು ಹೀಗೆ ಹೇಳಿದರೆ ನಮ್ಮ ಜನರಿಗೆ ಏನು ಉತ್ತರವನ್ನು ಹೇಳಬೇಕು? ತಮ್ಮ ಭೇಂಬರಿಗೆ ಡಿ.ಸಿ. ಯವರನ್ನು ಕರೆದು ಕೇಳಿ, ಅವರು ಪರ್ಮಿಟ್‌ಗಳನ್ನು ತೆಗೆದುಕೊಂಡಿದ್ದರೂ ಬಸ್‌ಗಳನ್ನು ಓಡಿಸುತ್ತಿಲ್ಲ. ನಾವು ಆಡಳಿತ ಪಕ್ಷದಲ್ಲಿದ್ದುಕೊಂಡು ಮಾಡುವುದಕ್ಕೆ ಆಗುವುದಿಲ್ಲ ಅಂದರೆ ಹೇಗೆ?

ಅಧ್ಯಕ್ಷರು:- ಬಸ್‌ಗಳನ್ನು ಓಡಿಸುವುದಕ್ಕೆ ಒಪ್ಪಿಕೊಂಡಿದ್ದಾರೆ.

ಚಾಮರಾಜನಗರಕ್ಕೆ ಬಸ್ಸ್ ಡಿಪೋ

57 (201) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರದಲ್ಲಿ ಸಾರಿಗೆ ಸಂಸ್ಥೆಯ ಡಿಪೋ ತೆರೆಯದಿರಲು ಕಾರಣವೇನು?

ಆ) ಈ ಬಗ್ಗೆ ಸರ್ಕಾರಕ್ಕೆ ಅನೇಕ ಬಾರಿ ಮನವಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಿಂದುಳಿದ ಗದಿ ಪ್ರದೇಶಕ್ಕೆ ಮೊದಲನೇ ಆದ್ಯತೆ ಕೊಡಬೇಕೆನ್ನುವುದು ಸರ್ಕಾರದ ನೀತಿಯಲ್ಲವೇ:

ಈ) ಕರ್ನಾಟಕ ರಾಜ್ಯಾದ್ಯಂತ ಎಷ್ಟು ಸಾರಿಗೆ ಜಪೋಗಳಿವೆ?

ಉ) ಈಗ ಎಷ್ಟು ಸಾರಿಗೆ ಡಿಪೋಗಳನ್ನು ತೆರೆಯಲು ಅನುಮತಿ ನೀಡಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು)

ಅ) ಚಾಮರಾಜನಗರವು ರಾಷ್ಟ್ರೀಕೃತವಲ್ಲದ ಪ್ರದೇಶವಾಗಿರುವುದರಿಂದ, ಸಾರಿಗೆ ಘಟಕವನ್ನು ನಿರ್ಮಿಸಲಾಗಿಲ್ಲ.

ಆ) ಇಲ್ಲ.

ಇ) ಹೌದು

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹಾಲಿ 110 ಘಟಕಗಳಿರುತ್ತದೆ.

ಉ) 1998-99ರಲ್ಲಿ 17 ಘಟಕಗಳನ್ನು ಪ್ರಾರಂಭಿಸುವ ಯೋಜನೆ ಇದೆ.

ಶ್ರೀ ವಾಟಾಳ್ ನಾಗರಾಜ್:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಸಾರಿಗೆ ಸಚಿವರು ಆಗುವುದಕ್ಕೆ ಮುಂಚೆ ಚಾಮರಾಜನಗರದಲ್ಲಿ ಐದು ಸಿಟಿ ಬಸ್‌ಗಳು ಓಡಾಡುತ್ತಿದ್ದವು.

ಸಿಂಧ್ಯರವರು ಮಂತ್ರಿಯಾದ ಮೇಲೆ ಈ ಬಸ್‌ಗಳನ್ನು ಓಡಿಸುವುದನ್ನು ನಿಲ್ಲಿಸಲಾಯಿತು, ಕಾರಣ ಏನು ಎಂಬುದು ಗೊತ್ತಾಗಲಿಲ್ಲ? ಎರಡನೆಯದಾಗಿ ಚಾಮರಾಜನಗರದಲ್ಲಿ ಹಿಂದೆ ಮಾನ್ಯ ಭೀಮಣ್ಣ ಖಂಡ್ರೆಯವರು ಸಚಿವರಾಗಿದ್ದಾಗ ಬಸ್ ಡಿಪೋ ಮಾಡಬೇಕೆಂದು ತೀರ್ಮಾನವನ್ನು ಕೈಗೊಂಡಿದ್ದರು. ಇದು ಆದ ನಂತರ ಅನೇಕ ಮನವಿಗಳನ್ನು ಸಲ್ಲಿಸಲಾಗಿತ್ತು ಮತ್ತು ತಮಗೂ ಒಂದು ಪತ್ರವನ್ನು ಬರೆದಿದ್ದೇನೆ, ಆದರೆ ನೀವು ಉತ್ತರದಲ್ಲಿ ಯಾವುದೇ ಮನವಿ ಬಂದಿಲ್ಲವೆಂದು ಹೇಳಿದ್ದೀರಿ. ಚಾಮರಾಜನಗರದಲ್ಲಿ ಬಸ್ ಡಿಪೋವನ್ನು ಪ್ರಾರಂಭ ಮಾಡಲು ಶಂಕು ಸ್ಥಾಪನೆಗೆ ವ್ಯವಸ್ಥೆ ಮಾಡುತ್ತೀರಿ ಮತ್ತು ಅದಕ್ಕೆ ಹಣಕಾಸಿನ ವ್ಯವಸ್ಥೆ ಮಾಡಿ ಕೂಡಲೇ ಪ್ರಾರಂಭಿಸುವಂತೆ ತಾವು ಭರವಸೆಯನ್ನು ಯಾವಾಗ ಕೊಡುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ– ಮಾನ್ಯ ಅಧ್ಯಕ್ಷರೆ, ಚಾಮರಾಜನಗರದಲ್ಲಿ ಸಿಟಿ ಬಸ್‌ಗಳನ್ನು ಓಡಿಸುವುದಕ್ಕೆ ಸಾಧ್ಯವಿಲ್ಲ. ಕಾರಣ ಏನೆಂದರೆ ಅದು ರಾಷ್ಟ್ರೀಕೃತ ಆಗಿರತಕ್ಕಂಥ ಏರಿಯಾ ಅಲ್ಲ. ಖಾಸಗಿ ಬಸ್‌ಗಳು ಓಡತಕ್ಕಂಥ ಏರಿಯಾ. ಮಾನ್ಯ ಸದಸ್ಯರು ಹೇಳಿರುವ ಐದು ಬಸ್‌ಗಳನ್ನು ಏಕೆ ನಿಲ್ಲಿಸಿದ್ದಾರೆ ಅದರ ಬಗ್ಗೆ ವಿಚಾರಿಸುತ್ತೇನೆ. ಈ ರೀತಿ ಏನಾದರೂ ನಿಲ್ಲಿಸಿದ್ದರೆ ಮತ್ತೆ ಪ್ರಾರಂಭ ಮಾಡಲಿಕ್ಕೆ ನಾನು ಅವರಿಗೆ ಸೂಚನೆಯನ್ನು ಕೊಡುತ್ತೇನೆ. ಎರಡನೇಯದಾಗಿ ಮಾನ್ಯ ಸದಸ್ಯರು ಡಿಪೋ ಆಗಬೇಕೆಂದು ಪತ್ರ ಬರೆದಿರುವುದು ನಿಜ. 1998-99ನೇ ಸಾಲಿನಲ್ಲಿ ಅಂದರೆ ಈ ವರ್ಷದಲ್ಲಿ ಡಿಪೋವನ್ನು ಮಂಜೂರು ಮಾಡಲು ನಾನು ಒಪ್ಪಿಗೆಯನ್ನು ಕೊಟ್ಟಿದ್ದೇನೆ.

ತೋಟಗಾರಿಕೆಗೆ ಪ್ರೋತ್ಸಾಹ ನೀಡುವುದು

58 (198) ಶ್ರೀ ಬಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ನಬಾರ್ಡ್ ನೆರವಿನೊಂದಿಗೆ ಸಣ್ಣ ಮತ್ತು ಅತಿಸಣ್ಣ ರೈತರಿಗೆ ತೋಟಗಾರಿಕೆ ಬೆಳೆಯನ್ನು ಬೆಳೆಯುವಂತೆ ಪ್ರೋತ್ಸಾಹಿಸಲು ಕಳೆದ 3 ವರ್ಷಗಳಿಂದ ಎಷ್ಟು ಹಣವನ್ನು ಸಾಲವನ್ನಾಗಿ ನೀಡಲಾಗಿದೆ.

2. ಈ ಯೋಜನೆಯಡಿ ಫಲಾನುಭವಿಗಳಾದವರ ಸಂಖ್ಯೆ:ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು).

3. ಯಾವ ಯಾವ ಬೆಳೆಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು)

1. ನಬಾರ್ಡ್ ನೆರವಿನೊಂದಿಗೆ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮೂಲಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತೋಟಗಾರಿಕೆ ಬೆಳೆಯನ್ನು ಬೆಳೆಯಲು ಪ್ರೋತ್ಸಾಹ ನೀಡುವುದಕ್ಕಾಗಿ ಕಳೆದ 3 ವರ್ಷಗಳಿಂದ ಅಂದರೆ 1994-95, 95-96, ಮತ್ತು 96-97ರಲ್ಲಿ ಒಟ್ಟು 5640 ಲಕ್ಷ ರೂ. ಗಳನ್ನು ಸಾಲವನ್ನಾಗಿ ನೀಡಲಾಗಿದೆ.